ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 04/03/2020

# ಏಕ ಪೌರತ್ವವೇ ನಮ್ಮ ಸಂವಿಧಾನದ ತಿರುಳು

## ಸಂವಿಧಾನದ ಆಶಯ ಪ್ರಸ್ತಾಪಿಸಿದ ಸ್ಪೀಕರ್

'ಏಕ ಸಂವಿಧಾನ ಹಾಗೂ ಏಕ ಪೌರತ್ವವು ಸಂವಿಧಾನದ ಮುಖ್ಯಾಂಶಗಳಲ್ಲಿ ಒಂದು ಎಂದು ಸ್ಪೀಕರ್ ಕಾಗೇರಿ ಪ್ರತಿಪಾದಿಸಿದ್ದಾರೆ.

ಸಂವಿಧಾನ ಜಾರಿಯ 70 ವರ್ಷಾಚರಣೆ ಹಿನ್ನೆಲೆಯಲ್ಲಿ ಎರಡು ದಿನಗಳ ವಿಶೇಷ ಚರ್ಚೆಗೆ ಚಾಲನೆ ನೀಡಿ ಮಾತನಾಡಿದರು. ''ಭ್ರಷ್ಟಾಚಾರ, ಅಸಮಾನತೆ ನಿರ್ಮೂಲನೆ ಮಾಡುವ ಜವಾಬ್ದಾರಿ ಹಾಗೂ ರಾಜಕೀಯ ಇಚ್ಛಾಶಕ್ತಿ ಕುಸಿತಗೊಂಡಿದೆ ಎನ್ನುವ ಭಾವನೆ ಸಾರ್ವಜನಿಕರಲ್ಲಿದೆ. ಹೀಗಾಗಿ ಜನರ ನಂಬಿಕೆ ಹಾಗೂ ಆಶೋತ್ತರಗಳಿಗೆ ಸ್ಪಂದಿಸಲು ನಾವು ಶ್ರಮಿಸಬೇಕಿದೆ,'' ಎಂದು ಹೇಳಿದ್ದಾರೆ.

''ಸಂವಿಧಾನ ರಚನೆಯಲ್ಲಿ ಮಂಗಳೂರಿನ ಬಿ.ಎನ್.ರಾವ್ ಸಂವಿಧಾನ ರಚನಾ ಸಭೆಯ ಸಲಹೆಗಾರರಾಗಿ ಸಂವಿಧಾನದ ಮೂಲ ಕರಡು ಪ್ರತಿಯನ್ನು ಅಂಬೇಡ್ಕರ್‌ಗೆ ಸಲ್ಲಿಸಿ ಸಂವಿಧಾನ ರಚನೆಯಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ,'' ಎಂದು ಶ್ಲಾಘಿಸಿದರು.

ಚರ್ಚೆಯಲ್ಲಿ ಭಾಗವಹಿಸುವಂತೆ ಸ್ಪೀಕರ್ ಎಷ್ಟೇ ಮನವಿ ಮಾಡಿದರೂ ಕಾಂಗ್ರೆಸ್ ಸದಸ್ಯರು ಸ್ಪಂದಿಸದೇ ಸ್ಪೀಕರ್ ಭಾಷಣದ ವೇಳೆ ಧರಣಿ ನಡೆಸಿದರು. ಕಾಂಗ್ರೆಸ್ ಸದಸ್ಯರು ''ಸಂವಿಧಾನ ವಿರೋಧಿ ಹೇಳಿಕೆ ನೀಡಿರುವ ಶಾಸಕರನ್ನು ಜತೆಗಿಟ್ಟುಕೊಂಡು ಸಂವಿಧಾನದ ಚರ್ಚೆಯಲ್ಲಿ ಪಾಲ್ಗೊಳ್ಳಲು ಸಾಧ್ಯವೇ,'' ಎಂದು ಪ್ರಶ್ನಿಸಿದರು. ಈ ವೇಳೆ ಭಾರತ್ ಮಾತಾ ಕಿ ಜೈ, ವಂದೇ ಮಾತರಂ ಘೋಷಣೆಯನ್ನು ಮೊಳಗಿಸಿದರು.

**ಸ್ಪೀಕರ್ ಭಾಷಣದ ಮುಖ್ಯಾಂಶ**

- ಸಂವಿಧಾನ ಮಹಿಳೆಯರಿಗೂ ಮೂಲಭೂತ ಹಕ್ಕಿನ ಜತೆಗೆ ರಾಜಕೀಯದಲ್ಲಿ ಭಾಗವಹಿಸುವ ಅವಕಾಶ ಕಲ್ಪಿಸಿದೆ.
ಸಮಾನ ಕೆಲಸಕ್ಕೆ ಸಮಾನ ವೇತನ, ಸಮಾಜದ ಪ್ರತಿಯೊಂದು ಜಾತಿ-ಜನಾಂಗದ ಮಹಿಳೆಯರ ಸುಧಾರಣೆ ಮಾಡಲಾಗುತ್ತಿದೆ.
- ಸಾಂವಿಧಾನಿಕ ನೈತಿಕತೆಯು ಜನರ ಸ್ವಾಭಾವಿಕ ಭಾವನೆಯಲ್ಲ ಎಂದು ಡಾ.ಅಂಬೇಡ್ಕರ್ ಹೇಳಿದ್ದಾರೆ. ಸಂವಿಧಾನಕ್ಕೆ ತಕ್ಕಂತೆ ಜನರು ಬಾಳಬೇಕು ಎನ್ನುವ ನೈತಿಕತೆಯನ್ನು ಪರೀಕ್ಷಿಸುವ ಹಾಗೂ ಮೌಲ್ಯ ಮಾಪನ ಮಾಡುವ ಜವಾಬ್ದಾರಿ ಹೊತ್ತಾಗ ಇದಕ್ಕೆ ಬೆಲೆ ಬರುತ್ತದೆ.
- 10 ವರ್ಷ ಇದ್ದ ಮೀಸಲು ಸೌಲಭ್ಯವನ್ನು 104ನೇ ತಿದ್ದುಪಡಿಯ ಮೂಲಕ 2030ರ ವರೆಗೆ ವಿಸ್ತರಿಸಲಾಗಿದೆ.
- ಸ್ವಾತಂತ್ರ್ಯ ಹೋರಾಟಕ್ಕೆ ನಮ್ಮನ್ನು ಸ್ಫೂರ್ತಿಗೊಳಿಸಿದ ಉದಾತ್ತ ಆದರ್ಶಗಳನ್ನು ಅನುಸರಿಸುವುದನ್ನು ಸಂವಿಧಾನ ಪ್ರತಿಪಾದಿಸುತ್ತದೆ.
- ನಮ್ಮ ಸಂವಿಧಾನ ಜಾರಿಗೆ ಬಂದ 70 ವರ್ಷಗಳಲ್ಲಿ ಸತಿಪದ್ಧತಿ, ಬಹು ಪತ್ನಿತ್ವ, ಬಾಯಿ ಮಾತಿನ ವಿಚ್ಛೇದನವನ್ನು ನ್ಯಾಯಾಲಯ ರದ್ದುಗೊಳಿಸಿದೆ.



**ಸಂವಿಧಾನ ಚರ್ಚೆ ಆರಂಭಿಸುವಾಗ ನೀವು (ಕಾಂಗ್ರೆಸ್) ನಡೆದುಕೊಂಡ ರೀತಿ ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿದೆ. 50-60 ವರ್ಷ ಕಾಲ ರಾಜ್ಯದಲ್ಲಿ ಆಡಳಿತ ನಡೆಸಿದ ನೀವೆಲ್ಲರೂ ಹಿರಿಯರು. ಆದರೆ ಈ ವಿಚಾರದಲ್ಲಿ ನೀವು ನಡೆದುಕೊಂಡ ರೀತಿಯ ಬಗ್ಗೆ ಜನರೇ ತೀರ್ಮಾನ ತೆಗೆದುಕೊಳ್ಳುತ್ತಾರೆ.**

**-ವಿಶ್ವೇಶ್ವರ ಹೆಗಡೆ ಕಾಗೇರಿ ಸ್ಪೀಕರ್**

9